
# ಶ್ರೀಶಂಕರರ ದೃಷ್ಟಿಯಲ್ಲಿ ಬದುಕಿನ ಸಾರ್ಥಕ್ಯ

ಡಾ. ಎಚ್. ರಾಮಚಂದ್ರ ಸ್ವಾಮಿ



ಮಹಾ ಮೇಧಾವಿಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸ ಬಹುದು–ಮೊದಲನೆಯದಾಗಿ, ಹೊರಗಿನ ಜೀವನದ ಆಗುಹೋಗುಗಳನ್ನೇ ಮರೆತು ಯಾವಾಗಲೂ ಯಾವುದೋ ಸೈದ್ಧಾಂತಿಕ ಸಮಸ್ಯೆಯನ್ನು ಪರಿಹರಿಸುವುದರಲ್ಲಿಯೇ ತಲ್ಲೀನರಾಗಿರುವವರು ಮತ್ತು ಎರಡನೆಯದಾಗಿ, ತಮ್ಮ ಕಾಲದ ಆಗುಹೋಗುಗಳಲ್ಲಿ ಮತ್ತು ಬದುಕಿನ ಹೋರಾಟದಲ್ಲಿ ಮನಃಪೂರ್ವಕವಾಗಿ ಭಾಗವಹಿಸುತ್ತಿದ್ದರೂ, ಅದರಲ್ಲಿ ತಾವು ಕಳೆದುಹೋಗದೆ, ಮಾನವನ ಸಾಂಸ್ಕೃತಿಕ ಇತಿಹಾಸದಲ್ಲಿ ಚಿರಕಾಲ ನಿಲ್ಲುವಂತಹ ತಮ್ಮದೇ ಆದ ಮೌಲಿಕ ಕೊಡುಗೆಯನ್ನು ಕೊಟ್ಟು ಹೋಗುವವರು. ಕೇರಳದ ಕಾಲಡಿ ಎಂಬಲ್ಲಿ ಎಂಟನೆಯ ಶತಮಾನದ ಕೊನೆಯ ಭಾಗದಲ್ಲಿ ಹುಟ್ಟಿದ ಶ್ರೀಶಂಕರರು ಈ ಎರಡನೆಯ ಗುಂಪಿಗೆ ಸೇರಿದವರು; ಸಮಾಜಸುಧಾರಕರಾಗಿದ್ದ ಅವರು ಹಾಕಿಕೊಟ್ಟ ಮಾರ್ಗದರ್ಶನವು ಹನ್ನೆರಡು ಶತಮಾನಗಳ ನಂತರವೂ ಜನರ ಧಾರ್ಮಿಕ ಜೀವನವನ್ನೂ ಸಾಮಾಜಿಕ ನಡತೆಯನ್ನೂ ನಿರ್ಣಯಿಸುತ್ತಿರುವುದನ್ನು ನಾವು ಇಂದೂ ಕಾಣಬಹುದು.

ಶಂಕರರ ದೃಷ್ಟಿಯಲ್ಲಿ ಬದುಕಿನ ಒಂದು ಸಾರ್ಥಕ್ಯವೆಂದರೆ ಸ್ವಂತದ ಮುಕ್ತಿಯನ್ನು ಸಾಧಿಸುವುದು:

**ಲಬ್ಧ್ವಾ ಕಥಂಚಿನ್ನರಜನ್ಮದುರ್ಲಭಂ ।**
**ತತ್ರಾಪಿ ಪುಂಸ್ತ್ವಂ ಶ್ರುತಿಪಾರದರ್ಶನಂ ।**
**ಯಸ್ತ್ವಾತ್ಮಮುಕ್ತೌ ನ ಯತೇತ ಮೂಢಧೀಃ ।**
**ಸ ಆತ್ಮಹಾ ಸ್ವಂ ವಿನಿಹಂತ್ಯಸದ್ಗ್ರಹಾತ್॥**

"ದುರ್ಲಭ ನರಜನ್ಮವನ್ನು ಹೇಗೋ ಪಡೆದುಕೊಂಡು, ಅದರಲ್ಲಿಯೂ ಪುರುಷತ್ವವನ್ನೂ ಹೊಂದಿ, ವೇದಪಾರಂಗತ್ವವನ್ನೂ ಸಹ ಪಡೆದಿದ್ದರೂ, ಮೂಢಬುದ್ಧಿಯುಳ್ಳ ಯಾವನು ತನ್ನ ಮುಕ್ತಿಗಾಗಿ ಪ್ರಯತ್ನ ಮಾಡುವುದಿಲ್ಲವೋ ಅವನು ಆತ್ಮಹತ್ಯೆಯನ್ನು ಮಾಡಿಕೊಂಡವನಂತೆ ಆಗುತ್ತಾನೆ; ಏಕೆಂದರೆ ಅಸದ್ವಸ್ತುಗಳನ್ನು ಗ್ರಹಿಸುವ ಮೂಲಕ ಅವನು ತನ್ನನ್ನು ತಾನೇ ಕೊಂದುಕೊಳ್ಳುತ್ತಾನೆ." (ವಿವೇಕಚೂಡಾಮಣಿ, ೪)

ಶಂಕರರು ಏಕೆ ಹೀಗೆ ಹೇಳುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕೆಂದಾಗ, ಅವರ ದೃಷ್ಟಿಯಲ್ಲಿ ಜೀವನದ ಪರಮ ಮೌಲ್ಯ ಯಾವುದು ಎಂಬ ಪ್ರಶ್ನೆ ಏಳುತ್ತದೆ. ಸಾಮಾನ್ಯವಾಗಿ ಅರ್ಥ, ಕಾಮ, ಧರ್ಮ, ಮೋಕ್ಷಗಳೆಂಬ **ಚತುರ್ವಿಧ ಪುರುಷಾರ್ಥ**ಗಳನ್ನು ಮೌಲ್ಯಗಳೆನ್ನುವರು. ಅರ್ಥಕಾಮಗಳನ್ನು "ಉಪಯುಕ್ತ" ಹಾಗೂ "ಆಪ್ಯಾಯಮಾನ" ಎನ್ನಬಹುದು; ಧರ್ಮವೆಂದರೆ "ನೈತಿಕತೆಯಿಂದ ಕೂಡಿದ ಸದಾಚಾರ" ಎನ್ನಬಹುದು; ಮೋಕ್ಷವೆಂದರೆ "ಸರ್ವಥಾ ಸ್ವಾತಂತ್ರ್ಯ" ಎಂದುಕೊಳ್ಳಬಹುದು. ಪರಮಸತ್ಯವೆಂಬುದು ಏನು ಎಂಬ ಬಗ್ಗೆ ಮತಭೇದವಿದ್ದರೂ, ಎಲ್ಲಾ ಮತಗಳೂ ಮೋಕ್ಷವು ಪರಮ ಸತ್ಯವನ್ನು ಅರಿತವನಿಗೇ ಸಿಕ್ಕುವುದು ಎಂದು ಒಪ್ಪುತ್ತವೆ.

**ಪುರುಷಾರ್ಥ**ಗಳೆಂದರೆ ಮನುಷ್ಯ ಪ್ರಯತ್ನಪೂರ್ವಕವಾಗಿ ಪಡೆದುಕೊಳ್ಳುವ ಮಾನವೀಯ ಮೌಲ್ಯಗಳು. ಹಸಿವಾದಾಗ ಊಟ ಮಾಡುವಂತಹ ಪ್ರಕೃತಿಸಹಜ ನಡವಳಿಕೆಗಳು ಪುರುಷಾರ್ಥಗಳಾಗುವುದಿಲ್ಲ. ಪ್ರಯತ್ನಪೂರ್ವಕವಾಗಿ ಪಡೆದುಕೊಳ್ಳುವಂಥವು ಎಂದಮೇಲೆ ನಮ್ಮಲ್ಲಿ ಅವು ಮೊದಲು ಇರುವುದಿಲ್ಲವೆಂದೂ, ಪಡೆದುಕೊಳ್ಳಲು ಹಾರೈಸುತ್ತೇವೆಂದೂ ಅರ್ಥವಾಗುತ್ತದೆ. ಸಾಧ್ಯವಾದುದನ್ನು ಮಾತ್ರ ಹೀಗೆ ಹಾರೈಸುವುದು. ನಿಜಜೀವನದಲ್ಲಿ ಸಾಧಿಸಿ ಪಡೆದುಕೊಳ್ಳಲು ಅಸಾಧ್ಯವಾದ ಸೈದ್ಧಾಂತಿಕ ಮೌಲ್ಯಗಳನ್ನು ಪುರುಷಾರ್ಥಗಳೆನ್ನಲಾಗುವುದಿಲ್ಲ. (ಉದಾಹರಣೆಗೆ, ವೈಜ್ಞಾನಿಕವಾಗಿ ನೂರಕ್ಕೆ ನೂರು ಕಾರ್ಯ ಸಾಮರ್ಥ್ಯವುಳ್ಳ ಯಂತ್ರವನ್ನು ತಯಾರಿಸುವುದೋ, ಒಂದು ವಸ್ತುವನ್ನು ತಣ್ಣಗೆ ಮಾಡುತ್ತ ಪರಮಶೂನ್ಯ ಖಿರತ್ವಕ್ಕೆ ಕೊಂಡೊಯ್ಯುವುದೋ ಅದು ಪುರುಷಾರ್ಥವಾಗುವುದಿಲ್ಲ; ಅದು ಅಸಾಧ್ಯ, ಅಂಥ ಪ್ರಯತ್ನದಲ್ಲಿ ಯಾವ ಪುರುಷಾರ್ಥವಿದೆ? ಎನ್ನುತ್ತೇವೆ). ಸಾಧಿಸಿ ಪಡೆದುಕೊಳ್ಳಬಹುದಾದುವುಗಳಲ್ಲಿಯೂ, ಮನುಷ್ಯ ಯಾವುದನ್ನು ಸಾಧಿಸುತ್ತಿದ್ದಾನೆ, ಯಾವುದನ್ನು ಸಾಧಿಸಬೇಕಾಗಿತ್ತು ಎಂಬ ವ್ಯತ್ಯಾಸವನ್ನು ಮಾಡಬಹುದು. ಪ್ರಕೃತಿಸಹಜವಾದ ಒತ್ತಡಗಳಿಂದ ಸಾಧಿಸಹೊರಡುವುದು ಮತ್ತು ವಿವೇಚನೆಯಿಂದ (ಅಥವಾ ಆಧ್ಯಾತ್ಮಿಕ ಒಲವಿನಿಂದ) ಸಾಧಿಸಹೊರಡುವುದು– ಇವೆರಡರಲ್ಲಿ ಎರಡನೆಯದು ಮೊದಲನೆಯದಕ್ಕಿಂತ ಉನ್ನತ ದರ್ಜೆಯ ಮೌಲ್ಯ. **ಅರ್ಥಕಾಮ**ಗಳನ್ನು ಮೊದಲನೆಯ ಗುಂಪಿಗೂ **ಧರ್ಮಮೋಕ್ಷ**ಗಳನ್ನು ಎರಡನೆಯ ಗುಂಪಿಗೂ ಸೇರಿಸಬಹುದು.

ಮೌಲ್ಯವು **ಸಾಧ್ಯ** ಅಥವಾ **ಗಮ್ಯ** ಆಗಿರಬೇಕೆಂದಾದಾಗ ಸಾಧನೆಯ ಮಾರ್ಗ ಯಾವುದು ಎಂಬ ಪ್ರಶ್ನೆ ಏಳುತ್ತದೆ. ಒಂದು ಅರ್ಥದಲ್ಲಿ ಸಾಧನೆಗೆ ಅಳವಡಿಸಿಕೊಳ್ಳುವ ಪರಿಕರ ಅಥವಾ ಮಾರ್ಗವೂ ಮೌಲ್ಯವೆನ್ನಿಸಿಕೊಳ್ಳುತ್ತದೆ; ಯಾವುದರ ಮೂಲಕ ಮೌಲ್ಯಸಾಧನೆ ಆಗುತ್ತದೆಯೋ ಅದನ್ನು ಬೆಲೆಯಿಲ್ಲದ್ದೆಂದು ತಿರಸ್ಕರಿಸಲಾಗದು. **ಕಾಮವನ್ನು ಸಾಧಿಸಿಕೊಳ್ಳಲಿಕ್ಕಾಗಿ ಅರ್ಥ; ಮೋಕ್ಷವನ್ನು ಸಾಧಿಸಿಕೊಳ್ಳಲಿಕ್ಕಾಗಿ ಧರ್ಮ.** ನಾವು ಪರಿಕರಮೌಲ್ಯವನ್ನು ಪರಮ ಮೌಲ್ಯವೆಂದು ಎಷ್ಟೋ ಬಾರಿ ತಪ್ಪು ತಿಳಿಯುತ್ತೇವೆ. ಉದಾಹರಣೆಗೆ, ಜಿಪುಣನಾದವನೊಬ್ಬನು ಅರ್ಥವನ್ನು ಗಳಿಸಿದರೂ, ಕಾಮಕ್ಕಾಗಿ ಅದನ್ನು ಬಳಸದೆ ಅಲ್ಲಿಯೇ ನಿಲ್ಲುತ್ತಾನೆ. ಹೀಗೆಯೇ, ಮೀಮಾಂಸಕರು ಧರ್ಮವು ಕರ್ತವ್ಯವೆಂದೋ ಸ್ವರ್ಗಸಾಧಕವೆಂದೋ ಪರಿಗಣಿಸಿ ಅಲ್ಲಿಯೇ ನಿಲ್ಲುತ್ತಾರೆ; ಅಲ್ಲದೆ ವೈದಿಕ ಕರ್ಮಾಚರಣೆಯನ್ನು ಯಾಂತ್ರಿಕವಾಗಿ ಮಾಡುತ್ತ ಅದನ್ನೇ ಧರ್ಮವೆಂದು ಕೊಳ್ಳುವವರಿಗೂ ಕಡಿಮೆಯಿಲ್ಲ. ವೇದಾಂತಿಗಳ ಪ್ರಕಾರ ಧರ್ಮವು ಸತ್ವಶುದ್ಧಿಗಾಗಿ ಬಳಸುವ ಪರಿಕರ. ಸತ್ವಶುದ್ಧಿಯಾಗದೆ ಆತ್ಮನನ್ನು ತಿಳಿಯಲಾಗುವುದಿಲ್ಲ ಎನ್ನುತ್ತದೆ **ಕಠೋಪನಿಷತ್ತು**:

**ನಾವಿರತೋ ದುಶ್ಚರಿತಾತ್ ನಾಶಾಂತೋ ನಾಸಮಾಹಿತಃ ।**
**ನಾಶಾಂತಮನಸೋ ವಾऽಪಿ ಪ್ರಜ್ಞಾನೇನೈನಮಾಪ್ನುಯಾತ್ ॥**

"ದುರಾಚಾರದಿಂದ ನಿವೃತ್ತನಾಗದವನೂ, ಶಾಂತನಲ್ಲದವನೂ, ಸಮಾಹಿತನಲ್ಲದವನೂ, ಮನಶ್ಶಾಂತಿಯಿಲ್ಲದವನೂ ಪ್ರಜ್ಞಾನದಿಂದ ಇವನನ್ನು (ಆತ್ಮನನ್ನು) ಪಡೆಯಲಾರನು" (ಕಠೋಪನಿಷತ್, ೧:೨:೨೪)

ಧರ್ಮದಂತೆ ಮೋಕ್ಷವು ಹೊಸದಾಗಿ ಸಾಧಿಸಬೇಕಾದದ್ದೇನಲ್ಲ; ತನ್ನ ನಿಜವಾದ ಆಧ್ಯಾತ್ಮಿಕ ಸ್ಥಿತಿಯನ್ನು ಅರಿತುಕೊಳ್ಳುವುದು, ಅನುಭಾವದಲ್ಲಿ ನಿಲ್ಲುವುದು ಮೋಕ್ಷ. ಮೋಕ್ಷವೇ ಆರೋಗ್ಯವಾದ ಸಹಜ ಸ್ಥಿತಿ; ಸಂಸಾರವೇ ಕೊರತೆಯ ಸ್ಥಿತಿ. ಈ ಕೊರತೆಯ ಸ್ಥಿತಿಯಿಂದ ಸಹಜ ಸ್ಥಿತಿಗೆ ಚೇತರಿಸಿಕೊಳ್ಳುವುದಕ್ಕೆ ವೇದಾಂತದಲ್ಲಿನ ವಿಭಿನ್ನ ಮತಗಳು ವಿಭಿನ್ನ ಶಿಸ್ತಿನ ಸಾಧನೆಗಳನ್ನು ಹಾಕಿಕೊಟ್ಟಿವೆ.

ಶ್ರೀಶಂಕರಾಚಾರ್ಯರು ಮೋಕ್ಷವನ್ನು ಒಪ್ಪುತ್ತಾರಾದರೂ, ಅದನ್ನು ಸಾಧ್ಯಸ್ಥಿತಿಯೆಂದು ಒಪ್ಪುವುದಿಲ್ಲ. ಧರ್ಮದ ಹಾಗೆ ಮೋಕ್ಷವನ್ನು ಹೊಸದಾಗಿ ಸೃಷ್ಟಿಸಿ ಬೆಳೆಸಲಿಕ್ಕಾಗುವುದಿಲ್ಲ; ಅದು ಸ್ವತಸ್ಸಿದ್ಧ ಎಂದು ಅವರ ಅಭಿಪ್ರಾಯ. ಧರ್ಮಕಾಮಗಳು ಸಾಧನೆ ಮಾಡಿ ಪಡೆದುಕೊಳ್ಳಬಹುದಾದಂಥವು–**ಸಾಧ್ಯ;** ಆದರೆ ಮೋಕ್ಷವು ಹಾಗಲ್ಲ. ಅದು ವ್ಯಕ್ತಿಯಿಂದ ಯಾವುದೋ ಸಾಧನೆಯನ್ನಾಗಲಿ ಜೀವಾತ್ಮನ ಯಾವುದೋ ಗುಣ ಪರಿವರ್ತನೆಯನ್ನಾಗಲಿ ಅಪೇಕ್ಷಿಸುವುದಿಲ್ಲ. ತನ್ನ ಬಗೆಗಿನ ಅಜ್ಞಾನ ನಾಶವೇ ಮೋಕ್ಷವೆಂದು ಅವರ ಮತ. ಅದಕ್ಕಾಗಿ, **ಜೀವೋ ಬ್ರಹ್ಮೈವ ನಾಪರಃ** – ಜೀವಾತ್ಮ ಮತ್ತು ಬ್ರಹ್ಮ ಒಂದೇ ಎಂಬ ಅದ್ವೈತದ ಪರಮ ಸತ್ಯವನ್ನು ಪುನಃ ನೆನಪಿಗೆ ತಂದುಕೊಳ್ಳಬೇಕು. ಜೀವಾತ್ಮ ಅಸತ್ಯವಲ್ಲ; ಬದಲಿಗೆ ಬ್ರಹ್ಮನ ವಿವರ್ತರೂಪ. ಶಂಕರರು ಬ್ರಹ್ಮಸೂತ್ರ ಭಾಷ್ಯದ ಪ್ರಾರಂಭದಲ್ಲಿಯೇ ಇದನ್ನು ಒಂದೇ ಚಂದ್ರ ಪ್ರತಿಬಿಂಬಿತವಾಗಿ ಎರಡಾಗಿ ಕಾಣುವ ಹಾಗೆ, ಒಂದೇ ಪರಬ್ರಹ್ಮವು ಅನೇಕ ಜೀವಾತ್ಮಗಳಾಗಿ ಕಾಣುತ್ತದೆ ಎಂದು ವಿವರಿಸುತ್ತಾರೆ. ಈ ಭ್ರಮೆ ಪರಿಹಾರವಾದಾಗ ಚಂದ್ರನ ದ್ವಿತ್ವ ನಾಶವಾಗುವುದೇ ಹೊರತು ಚಂದ್ರನೇ ನಾಶವಾಗುವುದಿಲ್ಲ. ಇದರಂತೆಯೇ ಮೋಕ್ಷ ಪ್ರಾಪ್ತವಾದಾಗ ನಾಶವಾಗುವುದು ಜೀವಾತ್ಮ ಅಲ್ಲ; ಬದಲಿಗೆ ಅವನಿಗೆ ತಪ್ಪಾಗಿ ಆರೋಪಿಸಲ್ಪಟ್ಟ ಮಿತಿ ಮಾತ್ರ. ಆದ್ದರಿಂದ, ಮೋಕ್ಷದ ಸ್ಥಿತಿ ಸಂಸಾರದಿಂದ ಬೇರೆಯಾಗುವುದು ದೃಷ್ಟಿಕೋನದಲ್ಲಿ ಮಾತ್ರ. ಈ ಅರ್ಥದಲ್ಲಿ ಮೋಕ್ಷವನ್ನು 'ಸಿದ್ಧ' ಎಂದಿದ್ದಾರೆ ಶಂಕರರು. ಬದಲಿಗೆ ಮೋಕ್ಷವು ಪರಿಶ್ರಮದಿಂದ 'ಸಾಧ್ಯ'ವಾಗುವುದಾದರೆ, ಯಾವ ಪರಿಕರಗಳಿಂದ ಅದು ಸಾಧ್ಯವಾಗುವುದೋ ಅವುಗಳ ಮಿತಿಯನ್ನೇ ಅದೂ ಹೊತ್ತುಕೊಳ್ಳುವುದು ತಾನೆ?

ಶಂಕರರ ಪ್ರಕಾರ ಪ್ರಯತ್ನವೆಂದರೆ ಆತ್ಮಪ್ರಕಾಶಕ್ಕಿರುವ ಅಡೆತಡೆಗಳನ್ನು ದಾಟುವುದು ಮಾತ್ರ. ಗ್ರಹಣಕಾಲದಲ್ಲಿ ಸೂರ್ಯನನ್ನು ಮರೆ ಮಾಡಿದ ಚಂದ್ರನು ಪಕ್ಕಕ್ಕೆ ಸರಿದೊಡನೆ ಸೂರ್ಯ ತನಗೆ ತಾನೇ ಪ್ರಕಾಶಿಸುವಂತೆ, ಮಾಯೆಯ ಪರದೆ ಹರಿದೊಡನೆ ಮೋಕ್ಷ ಅಥವಾ ಆತ್ಮಪ್ರಕಾಶ ಅಥವಾ ಬ್ರಹ್ಮಜ್ಞಾನ ಪ್ರಯತ್ನವಿಲ್ಲದೆ ಸಿದ್ಧಿಸುವುದು. ಅರಿಯದಿರುವಿಕೆಯ ಮೋಡವೇ ಮಾಯೆಯೆಂಬ ಭ್ರಮೆ; ಇದನ್ನು ಅರಿವಿನ ಮೂಲಕ ಪರಿಹರಿಸಿಕೊಳ್ಳುವುದೇ ಮೋಕ್ಷ. **ಧಾತು ಪ್ರಸಾದಾತ್ ಮಹಿಮಾನಮಾತ್ಮನಃ** –ಧಾತುಗಳ ಅಂದರೆ ಮನಸ್ಸೇ ಮುಂತಾದ ಕರಣಗಳ ಪ್ರಸನ್ನತೆಯಿಂದ ಆತ್ಮನ ಮಹಿಮೆಯನ್ನು ನೋಡುತ್ತಾನೆ ಎನ್ನುತ್ತದೆ ಕಠೋಪನಿಷತ್ತು. **ಯಮೇವೈಷ ವೃಣುತೇ ತೇನ ಲಭ್ಯಃ** – ತಾನು ಆಯ್ಕೆ ಮಾಡಿಕೊಂಡವರಿಗೆ ಆತ್ಮನು ಗೋಚರವಾಗುತ್ತಾನೆ ಎಂಬ ಮಾತಿದೆ. ಹೀಗಾಗಿ ಮೋಕ್ಷವು ಕೇವಲ ಸಾಧನೆಯ ಫಲವಲ್ಲ ಎನ್ನುವುದು ತಿಳಿದುಬರುತ್ತದೆ. ಪಾರಮಾರ್ಥಿಕವಾಗಿ **ವಿಶ್ವಾತ್ಮ ನಾನೆಂಬ ಬ್ರಹ್ಮಭಾವ, ವ್ಯಾವಹಾರಿಕದಲ್ಲಿ ಪ್ರೇಮಭಾವ**– Wholeness in the abstract and kinship in the concrete – ಇದು ಹೀಗೆ ಮೋಕ್ಷಕ್ಕಾಗಿ ಕಾದಿರುವ ಅದ್ವೈತಿಯ ಜೀವನದೃಷ್ಟಿ. ಈ ಸ್ಥಿತಿಯಲ್ಲಿರುವವನು ಪ್ರಪಂಚದಲ್ಲಿ ಏನನ್ನು ಕಂಡು ಭಯಪಡಬೇಕು, ಯಾರನ್ನು ಏತಕ್ಕಾಗಿ ದ್ವೇಷಿಸಬೇಕು? **ಇಂಥ ಮೋಕ್ಷವೇ ಶಂಕರರ ದೃಷ್ಟಿಯಲ್ಲಿ ಮಾನವ ಜೀವನದ ಪರಮ ಮೌಲ್ಯ, ಬದುಕಿನ ಸಾರ್ಥಕತೆ.** ■

---

## ಬಟ್ಟೆಯ ಮೇಲಿನ ರಕ್ತದ ಕಲೆ

**ಒಂದು ಸಲ ಗೋಸ್ವಾಮಿ ತುಲಸೀದಾಸರು ಶಿಷ್ಯ ಹರಿದಾಸನ ಜೊತೆ ಸಂತ ರವಿದಾಸರನ್ನು ಭೇಟಿಮಾಡಲು ಹೋದರು. ಆ ಸಮಯದಲ್ಲಿ ಅವರು ಸತ್ತ ಎತ್ತಿನ ಚರ್ಮ ಸುಲಿಯುತ್ತಿದ್ದರು. ಗೋಸ್ವಾಮಿಗಳು ಪ್ರಣಾಮ ಮಾಡಿದಾಗ, ರವಿದಾಸರು ತಬ್ಬಿಕೊಳ್ಳಲು ತಮ್ಮ ಎರಡೂ ಕೈಗಳನ್ನು ಮುಂದೆ ಚಾಚಿದರು. ಆದರೆ ಅವರ ಕೈಗಳು ರಕ್ತಸಿಕ್ತವಾಗಿದ್ದವು. ಆಲಿಂಗಿಸಿಕೊಂಡರೆ, ಆ ರಕ್ತ ಮೈಗೆ ಅಂಟುವುದು, ಬಟ್ಟೆ ಮಲಿನವಾಗುವುದು ಎಂದು ಗೋಸ್ವಾಮಿಗಳು ತಬ್ಬಿಕೊಳ್ಳದೆಯೇ, ಕೈಜೋಡಿಸಿಯೇ ಪ್ರಣಾಮ ಮಾಡಿದರು. ತುಲಸೀದಾಸರು ಏಕೆ ಆಲಿಂಗನ ಮಾಡಿಕೊಳ್ಳಲಿಲ್ಲ ಎನ್ನುವುದು ರವಿದಾಸರಿಗೆ ತಿಳಿಯಿತು. ಅವರು ಏನೂ ಹೇಳದೆ, ಸುಮ್ಮನೆ ಮುಗುಳ್ನಕ್ಕರು. ನಂತರ ಇಬ್ಬರೂ ಆಧ್ಯಾತ್ಮಿಕ ವಿಚಾರಗಳ ಬಗ್ಗೆ ಮಾತನಾಡುತ್ತ ಬಹಳ ಕಾಲ ಕಳೆದರು. ಗೋಸ್ವಾಮಿಗಳು ತಮ್ಮ ನಿವಾಸಕ್ಕೆ ಹಿಂತಿರುಗಿ, ಬಟ್ಟೆ ಬದಲಾಯಿಸಿದರು. ಆ ಹೊಸ ಬಟ್ಟೆಗಳಲ್ಲಿ ರಕ್ತದ ಕಲೆಗಳು ಕಂಡುಬಂದವು!! ತಮ್ಮ ಶಿಷ್ಯ ಹರಿದಾಸರಿಗೆ, ಅದನ್ನು ತೊಳೆದು ಬರುವಂತೆ ಹೇಳಿದರು. ಅವರು ಒಗೆದು ತಂದು, "ಈ ಕಲೆ ಎಷ್ಟು ಗಟ್ಟಿಯಾಗಿ ಅಂಟಿಕೊಂಡಿದೆಯೆಂದರೆ, ಎಷ್ಟು ಪ್ರಯತ್ನಿಸಿದರೂ ಹೋಗುತ್ತಿಲ್ಲ. ಈ ಕಲೆ ಹೋಗುವುದೇ ಇಲ್ಲ ಎನಿಸುತ್ತದೆ" ಎಂದರು. ಈ ಮಾತು ಕೇಳುತ್ತಿದ್ದಂತೆಯೇ, ತುಲಸೀದಾಸರಿಗೆ ಎಲ್ಲವೂ ಅರ್ಥವಾಯಿತು. ಅವರು ಹರಿದಾಸರಿಗೆ ಹೇಳಿದರು: " ನಾನು ಒಬ್ಬ ಸಂತನ ಮನಸ್ಸಿಗೆ ದುಃಖವನ್ನುಂಟುಮಾಡಿದೆ. ಅವನ ಕೈಯಲ್ಲಿ ರಕ್ತವಿದೆ ಎಂದು ನಾನು ಆತನ ಆಲಿಂಗನ ಮಾಡಿಕೊಳ್ಳಲಿಲ್ಲ. ಆದರೆ ಅಂತಹ ಕ್ಷುದ್ರ ಯೋಚನೆಗಳಿಗಿಂತ ಅವರು ಅತೀತರು. ಆದ್ದರಿಂದ, ರವಿದಾಸರನ್ನು ಆಲಿಂಗಿಸಿಕೊಳ್ಳುವ ತನಕ, ನನಗೆ ಮನಃಶಾಂತಿ ದೊರಕದು." ಹೀಗೆ ಯೋಚಿಸಿ, ರವಿದಾಸರ ಹತ್ತಿರ ಹೋಗಿ, ಆಲಿಂಗಿನ ಮಾಡಿಕೊಳ್ಳಲು ಕೈಚಾಚಿ ಹೀಗೆ ಹೇಳಿದರು: "ಎಲ್ಲಿಯವರೆಗೆ ನೀವು ಕ್ಷಮಿಸುವುದಿಲ್ಲವೋ ಅಲ್ಲಿಯವರೆಗೆ ನಾನು ಇಲ್ಲಿಂದ ಅಲ್ಲಾಡುವುದಿಲ್ಲ." ರವಿದಾಸರ ಕಣ್ಣುಗಳು ಅಶ್ರುಪೂರ್ಣವಾದವು. "ನನ್ನಲ್ಲಿ ಏಕೆ ಕ್ಷಮೆ ಕೋರುತ್ತಿದ್ದೀಯೆ? ಮೊದಲ ಭೇಟಿಯಲ್ಲಿ ನನಗೆ ನಿನ್ನ ಆಲಿಂಗನದ ಭಾಗ್ಯ ದೊರೆಯಲಿಲ್ಲ. ಎರಡನೆಯ ಭೇಟಿಯಲ್ಲಿ ದೊರಕುತ್ತಲಿದೆ." ಬಳಿಕ ಇಬ್ಬರೂ ಕಣ್ಣೀರು ಸುರಿಸುತ್ತ, ತಬ್ಬಿಕೊಂಡರು. ನಂತರ ತುಲಸೀದಾಸರು ಬಟ್ಟೆ ಬದಲಿಸಿದಾಗ, ರಕ್ತದ ಕಲೆ ಇರಲಿಲ್ಲ. ಒಂದು ನುಡಿ ಇದೆ: "ಅಜ್ಞಾನದ ಕಾರಣದಿಂದಾಗಿ ಬೇರೆಯವರ ಚರ್ಮ ನಮಗೆ ಅಪವಿತ್ರವಾಗಿ ತೋರುತ್ತದೆ. ಆದರೆ, ಚರ್ಮ ಬರೀ ದೇಹದ ಹೊದಿಕೆ. ದೇಹದಲ್ಲಿ ಭಗವಂತ ಅಂತರ್ಯಾಮಿಯಾಗಿ ಇರುತ್ತಾನೆ. ಆದ್ದರಿಂದ ದೇಹ ಪವಿತ್ರವೇ. ನಿಜವಾದ ಅಪವಿತ್ರತೆ ಒಳಗಿನ ಕಾಮನೆಗಳದ್ದು. ದೇಹದೊಳಗೆ ಎಲ್ಲ ಬಗೆಯ ಆಸೆಗಳು, ಮೋಹ ಇರುತ್ತವೆ. ಅವುಗಳ ದುರ್ವಾಸನೆ ಇದ್ದರೆ, ಸದ್ಗುರುವಾದ ಭಗವಂತ ಹೇಗೆ ತಾನೆ ಅದರಲ್ಲಿ ಪ್ರವೇಶಿಸುತ್ತಾನೆ?"**

**(ಹಿಂದಿ ಮೂಲ: ಡಾ. ಶರದ ಚಂದ್ರ ಪಂಡಾರಕರ್; ಅನುವಾದ: ಸ್ವಾಮಿ ಶಾಂತಿನಾಥಾನಂದ, ವಾರಾಣಸಿ)**